

# ಆತ್ಮೀಕ ಮನಸ್ಸುಳ್ಳವರಾಗಿರುವದು ಮತ್ತು ಭೂಲೋಕದಲ್ಲಿ ಜಾಣರಾಗಿರುವದು

ಅಶೀಷ್ ರಾಯಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2024

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು - ಜೆ.ವಿ - ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕ್ಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿವರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್‌ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books
**ಚರ್ಚ್ ಆಪ್:** apcwo.org/app | **ಸತ್ಯವೇದ ಕಾಲೇಜು:** apcbiblecollege.org
**ಇ-ಕಲಿಕೆ:** apcbiblecollege.org/elearn | **ಸಲಹಾ ಸೇವೆ:** chrysalislife.org
**ಸಂಗೀತ:** apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
**ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada - Being Spiritually Minded & Earthly Wise)

# ಆತ್ಮೀಕ ಮನಸ್ಸುಳ್ಳವರಾಗಿರುವದು ಮತ್ತು ಭೂಲೋಕದಲ್ಲಿ ಜಾಣರಾಗಿರುವದು

# ಪರಿವಿಡಿ


ಪರಿಚಯ

1. ಕ್ರೈಸ್ತೀಯ ಜೀವಿತದಲ್ಲಿ ಒತ್ತಡ 1

2. ತಪ್ಪಾದ ಆಯ್ಕೆಗಳು, ತಪ್ಪುಗಳು ಮತ್ತು ಅವುಗಳ ಪರಿಣಾಮಗಳು 4

3. ಆದದ್ದರಿಂದ, ಜಾಣರಾಗಿರಿ 6

4. ಆತ್ಮೀಕರಾದರೂ ಪ್ರಾಯೋಗಿಕರಾಗಿರಬೇಕು 7

5. ಜ್ಞಾನ–ನಮ್ಮ ರಕ್ಷಣೆ 10

6. ದೇವರ ಒಳ್ಳೇತನ 12

# ಪರಿಚಯ

**ರೋಮಾಪುರದವರಿಗೆ 8:28**

**ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ.**

ಆದರೆ ತಪ್ಪಾದ ಆಯ್ಕೆಗಳು, ದಡ್ಡತನದ ತಪ್ಪುಗಳು, ತಿಳುವಳಿಕೆಯಿಲ್ಲದ ತೀರ್ಮಾನಗಳು, ಸೋಮಾರಿತನದ ಘೋರವಾದ ಪರಿಣಾಮಗಳು ಮತ್ತು ಸರಿಯಾದ ಸಿದ್ಧತೆ ಇಲ್ಲದರ ನಿಮಿತ್ತ ಕಾಣಿಸಿಕೊಳ್ಳುವ ಇತರೆ ದುರಂತಗಳಿಗೆ ಕಾರಣ ಏನು? ಕ್ರೈಸ್ತನ ಸ್ವಂತ ಕಾರ್ಯಗಳ ನಿಮಿತ್ತ ಉಂಟಾಗುವ ಪರಿಣಾಮಗಳಿಗೆ ಕಾರಣ ಏನು? ಹೆಚ್ಚಿನ ಆತ್ಮೀಕನಾಗಿರುವ ಕ್ರೈಸ್ತನು ಈ ಜೀವನದ ವಿಷಯಗಳಲ್ಲಿ ತನ್ನನ್ನು ಶಿಕ್ಷಿತನನ್ನಾಗಿಸಿಕೊಳ್ಳುವದನ್ನು ನಿರ್ಲಕ್ಷಿಸಿರುವದಕ್ಕೆ ಕಾರಣ ಏನು? ಕ್ರೈಸ್ತನ ಸ್ವಂತ ಬೇಜವಾಬ್ದಾರಿತನದ ನಿಮಿತ್ತ ಉಂಟಾಗುವ ಕಾರ್ಯಗಳಿಗೆ ಕಾರಣ ಏನು? ಈ ಎಲ್ಲಾ ಕಾರ್ಯಗಳಿಗೆ ದೇವರು ಕಾರಣನಾಗಿದ್ದಾನೆಯೇ?

ಹಲವಾರು ಕ್ರೈಸ್ತರು ಕಷ್ಟಪಡುತ್ತಿರುವದನ್ನು ಮತ್ತು ಬಹುತೇಕ ತಪ್ಪಿಸಿಕೊಳ್ಳಲಾಗದ ಒತ್ತಡಗಳ ನಡುವೆ ಸಿಕ್ಕಿಕೊಂಡಿರುವದನ್ನು ನಾವು ನೋಡಬಹುದಾಗಿದೆ. ಕಷ್ಟದ ಸಮಯಗಳಿಂದ ತನ್ನ ಜನರಿಗೆ ಲಾಭವಾಗಬೇಕು ಮತ್ತು ಅವರು ಬಲಗೊಳ್ಳಬೇಕು ಎಂಬ ಕಾರಣಕ್ಕೆ ಅವರು ಕಷ್ಟಗಳನ್ನು ಹಾದುಹೋಗುವಂತೆ ಮತ್ತು ಎದುರಿಸುವಂತೆ ದೇವರು ಅನುಮತಿಸುತ್ತಾನೆ ಎಂದು ನಮ್ಮ ದೈವಶಾಸ್ತ್ರವು ವಿವರಿಸುತ್ತದೆ. ಆದರೆ ಶ್ರಮೆಗಳು ಮತ್ತು ಕಷ್ಟಗಳ ಅನುಭವಗಳೆಲ್ಲವೂ ದೇವರಿಂದಲೇ ಬರುತ್ತವೆಯೇ?

ಒಂದುವೇಳೆ ನಾವು ತಾಳ್ಮೆಯಿಂದ ಕಾರ್ಯಗಳನ್ನು ಆಳವಾಗಿ ಪರೀಕ್ಷಿಸಿದರೆ, ಕೆಲವೊಮ್ಮೆ ನಾವೆದುರಿಸುವ ಸಂಕಟಗಳಿಗೆ ನಡೆಸಿರುವ ನಿರ್ದಿಷ್ಟವಾದ ತೀರ್ಮಾನಗಳು ಮತ್ತು ಆಯ್ಕೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಯಾವ ರೀತಿಯದ್ದಾಗಿದ್ದರೂ—ನಮ್ಮ ತಪ್ಪಾದ ತೀರ್ಮಾನಗಳು—ನಾವು ಎದುರಿಸುತ್ತಿರುವಂಥ ಅನಾಹುತಗಳಿಗೆ ಕಾರಣವಾಗಿರುತ್ತದೆ. ನಾವು ನಮ್ಮ ಅನುಭಗಳನ್ನು ಆತ್ಮೀಕರಣಮಾಡಿ ಅಂಥ

ಶ್ರಮೆಗಳಿಗೆ ದೇವರನ್ನು ಹೊಣೆಗಾರನನ್ನಾಗಿ ಮಾಡಬೇಕೇ? ನಾವೆಲ್ಲರೂ, ಅಪೂರ್ಣರಾಗಿರುವ ಕಾರಣ, ತಪ್ಪುಗಳನ್ನು ಮಾಡುತ್ತೇವೆ ಎಂಬದು ಸತ್ಯವೇ ಆಗಿದೆ. ಪ್ರಥಮ ಬಾರಿಗೆ ನಾವು ಎದುರಿಸುವ ಪರಿಸ್ಥಿತಿಗಳಲ್ಲಿ ತಪ್ಪಾದ ತೀರ್ಪುಗಳು ಘೋರವಾದ ಪರಿಣಾಮಗಳಿಗೆ ಕಾರಣವಾಗಿರುತ್ತವೆ. ದೇವರು ನಮ್ಮ ವಿಷಯವಾಗಿ ಮಾಡಿರುವ ಆಲೋಚನೆಗಳ ಮೇಲೆ ನಮ್ಮ ತಪ್ಪಾದ ಆಯ್ಕೆಗಳು ಹೇಗೆ ಪರಿಣಾಮವನ್ನು ಬೀರುತ್ತವೆ? ದೇವರ ಉನ್ನತವಾದ ಮತ್ತು ಉತ್ತಮವಾದ ಆಲೋಚನೆಗಳು ನಮ್ಮ ಜೀವಿತಗಳಲ್ಲಿ ನೆರವೇರದಂತೆ ನಮ್ಮ ತಪ್ಪುಗಳು ಅವುಗಳನ್ನು ಸೋಲಿಸುತ್ತವೆಯೇ, ಬದಲಾಯಿಸುತ್ತವೆಯೇ ಅಥವಾ ಯಾವುದಾದರು ರೀತಿಯಲ್ಲಿ ಅಡ್ಡಿಪಡಿಸುತ್ತವೆಯೇ? ಈ ಪುಸ್ತಕವು ನಮ್ಮ ಕ್ರೈಸ್ತೀಯ ನಂಬಿಕೆಯ ಪ್ರಾಯೋಗಿಕ ಭಾಗವನ್ನು ಜಾಗೃತಗೊಳಿಸುವ ಉದ್ದೇಶವನ್ನು ಹೊಂದಿದೆ. ನಮ್ಮ ಜೀವಿತಗಳ ಮೇಲಿರುವ ದೇವರ ಯೋಜನೆಯನ್ನು ನೆರವೇರಿಸುವಲ್ಲಿ ನಮ್ಮ ಗಂಭೀರವಾದ ಜವಾಬ್ದಾರಿಕೆಯನ್ನು ಅರ್ಥಮಾಡಿಸುವ ಉದ್ದೇಶವನ್ನು ಇದು ಹೊಂದಿದೆ. ನಮ್ಮ ಕ್ರಿಯೆಗಳನ್ನು ಆತ್ಮೀಕರಣಗೊಳಿಸುವದನ್ನು ಮತ್ತು ಅವುಗಳ ಜವಾಬ್ದಾರಿಕೆ ಕಲ್ಪಿಸಿಕೊಳ್ಳುವದನ್ನು ನಿಲ್ಲಿಸಲು ಇದು ಕರೆಯನ್ನು ಕೊಡುತ್ತದೆ. ಈ ಜೀವನದ ಕಾರ್ಯಗಳಲ್ಲಿ "ಜಾಣರಾಗಲು" ಇದು ಬುದ್ಧಿಮಾತಾಗಿದೆ.

ದೇವರು ಆಶೀರ್ವದಿಸಲಿ!

ಅಶೀಷ್ ರಾಯಚೂರ್

# 1
# ಕ್ರೈಸ್ತೀಯ ಜೀವಿತದಲ್ಲಿ ಒತ್ತಡ

**ಕೊಲೊಸ್ಸೆಯವರಿಗೆ 3:1,2**
**[1]ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ.**
**[2]ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ.**

ದೇವರ ರಾಜ್ಯಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿರುವ ಬೇರೆ ರಾಜ್ಯದ ಜನರ ನಡುವೆ ಜೀವಿಸುವ ಕ್ರೈಸ್ತನು *"ಮೊದಲು ದೇವರ ರಾಜ್ಯಕ್ಕಾಗಿ ತವಕಿಸಲು"* (ಮತ್ತಾಯ 6:33) ಪ್ರಯತ್ನಿಸುವಾಗ ಅವನ ಜೀವಿತದಲ್ಲಿ ಸತತವಾದ ಒತ್ತಡಗಳು ಇರುವಂತೆ ಅನ್ನಿಸುತ್ತದೆ. ನಾವು ಭೂಲೋಕದಲ್ಲಿ ಇದ್ದೇವೆ, ಆದರೆ ಮೇಲಿರುವವುಗಳನ್ನು, ಪರಲೋಕದ ವಿಷಯಗಳನ್ನು ಹುಡುಕಬೇಕು. ಭೂಲೋಕದಲ್ಲಿ ಜೀವಿಸುವದರೊಂದಿಗೆ ವೃತ್ತಿ ಕಟ್ಟಿಕೊಳ್ಳುವ, "ಏನಾದರು" ಆಗುವ, ಯಶಸ್ಸು ಸಾಧಿಸುವ, ಆಸ್ತಿ ಸಂಪಾದನೆ ಮಾಡುವ ದೊಡ್ಡ ಜವಾಬ್ದಾರಿಯೂ ಬರುತ್ತದೆ, ಆದರೂ ಬಹುತೇಕ ಕೊನೆಯಿಲ್ಲದ ವ್ಯವಹಾರದ ನಡುವೆಯೂ, ನಮ್ಮ ಮನಸ್ಸುಗಳನ್ನು—ನಮ್ಮ ಭಾವನೆಗಳನ್ನು, ನಮ್ಮ ಆಸಕ್ತಿಗಳನ್ನು, ನಮ್ಮ ಬಯಕೆಗಳನ್ನು, ನಮ್ಮ ಅನ್ವೇಷಣೆಗಳನ್ನು—ಮೇಲಿರುವ ಕಾರ್ಯಗಳ ಮೇಲೆ ಇಡುವಂತೆ ನಮಗೆ ಹೇಳಲಾಗಿದೆ! ಒಬ್ಬ ವ್ಯಕ್ತಿಯ ಆತ್ಮೀಕ, ಮಾನಸಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳನ್ನು ವೃದ್ಧಿಸುವಂಥ ನಿಜವಾದ ಸವಾಲು ಯಾವುದಾದರು ಇದೆ ಎಂದಾದರೆ, ಅದು ಇದುವೇ ಆಗಿದೆ! ಆದರೆ, ದೇವರು ನಮ್ಮಿಂದ ನೆರವೇರಿಸಲು ಆಗದಂಥ ವಿಷಯವನ್ನು ಎಂದಿಗೂ ನಮ್ಮ ಮುಂದಿಡುವದಿಲ್ಲ. ಆತನು ನಮಗೆ ಈ ಆಜ್ಞೆಯನ್ನು ಕೊಟ್ಟಿರುವದು ಯಾಕಂದರೆ ಅದು ನಮ್ಮಿಂದ ಸಾಧ್ಯವಿದೆ—ಅದು ನಾವು ದೂರವಿರುವದರಿಂದ ಮಾತ್ರವಲ್ಲ—ಅದನ್ನು ಕಾಪಾಡಿಕೊಳ್ಳಲು—ಆತನು ಶಕ್ತಿಯನ್ನು ಕೊಡುವದರಿಂದಲೇ ಆಗಿದೆ. ಏನೇ ಆದರೂ, ಈ ಆಜ್ಞೆಗನುಸಾರವಾಗಿ ನಮ್ಮ ಜೀವಿತಗಳನ್ನು ಕ್ರಮಪಡಿಸಿಕೊಳ್ಳುವದರೊಂದಿಗೆ ಬರುವ "ಒತ್ತಡಗಳನ್ನು" ಆತ್ಮೀಕವಾಗಿ ಪಕ್ವನಾಗಿರುವ ಪ್ರತಿಯೊಬ್ಬ ಕ್ರೈಸ್ತನು

"ನಿಜವಾದ" ಲೋಕದಲ್ಲಿ ಖಂಡಿತವಾಗಿಯೂ ಗುರುತಿಸಿಕೊಳ್ಳುವವನಾಗಿದ್ದಾನೆ.

ಅನುದಿನದ ಜೀವನದಲ್ಲಿ ಅಸಂಖ್ಯವಾದ "ವಿಷಯಗಳು" ಎದುರಾಗುವದರಿಂದ ಎರಡು ದಿಕ್ಕುಗಳಲ್ಲಿ ಕ್ರೈಸ್ತನು "ಸೆಳೆತವನ್ನು" ಅನುಭವಿಸುತ್ತಾನೆ. ಉದಾಹರಣೆಗೆ, ಯಶಸ್ಸಿಗೆ ನಿಜವಾದ ಕ್ರಮಗಳು ಯಾವುವು? ತಾತ್ಕಾಲಿಕವಾದ ಗುಣಮಟ್ಟದಲ್ಲಿ, ಯಶಸ್ಸನ್ನು ಸಾಧನೆಗಳು ಮತ್ತು ಸಂಪಾದಿಸಲಾಗಿರುವ ನಿಕ್ಷೇಪಗಳ ಆಧಾರದಲ್ಲಿ ಅಳೆಯಲಾಗುತ್ತದೆ, ಆದರೆ ದೇವರ ರಾಜ್ಯದಲ್ಲಿ ಯಶಸ್ಸನ್ನು, ಒಬ್ಬನು ತಂದೆಯ ಚಿತ್ತವನ್ನು ನೆರವೇರಿಸುತ್ತಾ ಇದ್ದಾನೋ ಇಲ್ಲವೋ ಎಂಬದರ ಆಧಾರದಲ್ಲಿ ದೃಢಪಡಿಸಲಾಗುತ್ತದೆ. ಭೂಲೋಕದ ಸಾಧನೆಗಳು ಮತ್ತು ಆಸ್ತಿ ಸಂಪಾದನೆಯಲ್ಲಿ ಯಾವುದೇ ತೊಂದರೆ ಇಲ್ಲ, ಆದರೆ ದೇವರ ಉನ್ನತವಾದ ಕರೆ *"ನಮ್ಮ ಪ್ರಾಣವನ್ನು ಕಂಡುಕೊಳ್ಳುವದಕ್ಕಾಗಿ ಅದನ್ನು ಕಳೆದುಕೊಳ್ಳಲು"* (ಮತ್ತಾಯ 16:25) ಕರೆಯುತ್ತದೆ. ಹೀಗೆ, ಲೋಕದ ಯಶಸ್ಸಿನ ಕ್ರಮಗಳಲ್ಲಿ ಒಬ್ಬನು ಯಶಸ್ವಿಯಾಗುವಂತೆ ಮಾಡುವ ಮಾರ್ಗ ಅಥವಾ ಕ್ರಿಸ್ತನಲ್ಲಿ ದೇವರ ಉನ್ನತವಾದ ಕರೆಯನ್ನು ನೆರವೇರಿಸುವ ಕಡೆಗೆ ಒಬ್ಬನು ಪ್ರಗತಿ ಹೊಂದುವದನ್ನು ವಿಸ್ತರಿಸುವ ಮಾರ್ಗ—ಇವುಗಳಲ್ಲಿ ಯಾವ ಮಾರ್ಗವನ್ನು ಆರಿಸಿಕೊಳ್ಳಬೇಕು ಎಂಬ ಜೀವನದ ಹಂತದ ಸಮೀಪಕ್ಕೆ ಬರುವಾಗ ಕ್ರೈಸ್ತನು ಸತತವಾಗಿ ಹೋರಾಟವನ್ನು ಎದುರಿಸುತ್ತಾನೆ.

"ಹೋರಾಟದ ಅನೇಕ ಕಾರ್ಯಗಳೊಂದಿಗೆ," ಕ್ರೈಸ್ತನು ತನ್ನ ಭೂಲೋಕದ ಯಾತ್ರೆಯ ಸಮಯದಲ್ಲಿ ಲೋಕ ಮತ್ತು ಸೈತಾನನೊಂದಿಗೆ ಹೋರಾಡಬೇಕು. ಕರ್ತನಾದ ಯೇಸು ಕ್ರಿಸ್ತನು ತಾನೇ ಹೇಳಿರುವದೇನೆಂದರೆ, *"ಯಾಕಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲೂ ಜಾಣರಾಗಿದ್ದಾರೆ"* (ಲೂಕ 16:8). ಹೀಗೆ ಇರಬಾರದು, ಆದರೆ ಕೆಲವೊಮ್ಮೆ ಕಾರ್ಯಗಳು ಹೀಗೆಯೇ ಇರುತ್ತವೆ, ಯಾಕಂದರೆ ಬೆಳಕಿನ ಮಕ್ಕಳು ತಂದೆಯು ಅವರಿಗೆ ವ್ಯವಸ್ಥೆ ಮಾಡಿರುವ ಜ್ಞಾನದ ದೈವೀಕ ಸೌಕರ್ಯಗಳನ್ನು ಹಿಡಿದುಕೊಳ್ಳಲು ವಿಫಲರಾಗುವಾಗ ಹೀಗಾಗುತ್ತದೆ. ಕ್ರೈಸ್ತನು ಬರೆಯುವದನ್ನು, ಕೆಲಸ ಮಾಡುವದನ್ನು, ಮತ್ತು ಅನೇಕ ಸಂದರ್ಭಗಳಲ್ಲಿ ಅನುದಿನದ ಜೀವಿತದ ಚಟುವಟಿಕೆಗಳಲ್ಲಿ *"ಈ ಲೋಕದ ಮಕ್ಕಳೊಂದಿಗೆ"* ಸ್ಪರ್ಧಿಸುವದನ್ನು ಕಲಿತುಕೊಳ್ಳಬೇಕು. ಇದಲ್ಲದೆ, ಕ್ರೈಸ್ತನು ವೈರಿಯ ತಂತ್ರಗಳ ಗುರಿಯಾಗಿದ್ದಾನೆ.

ದೇವರ ಉನ್ನತವಾದ ಮತ್ತು ಉತ್ತಮವಾದ ಕಾರ್ಯಗಳಿಂದ ಕ್ರೈಸ್ತನನ್ನು ದೂರಮಾಡಲು ಅವನನ್ನು ಶೋಧಿಸುವದರಲ್ಲಿಯೂ ಅವನಿಗೆ ತೊಂದರೆ ಕೊಡುವದರಲ್ಲಿಯೂ ಸಂತೋಷಪಡುವ ಸೈತಾನನು ಈಗಲೂ ಇದ್ದಾನೆ.

# 2
# ತಪ್ಪಾದ ಆಯ್ಕೆಗಳು, ತಪ್ಪುಗಳು ಮತ್ತು ಅವುಗಳ ಪರಿಣಾಮಗಳು

**ಗಲಾತ್ಯದವರಿಗೆ 6:7,8**

**7ಮೋಸಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು.**

**8ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು. ಆತ್ಮನನ್ನು ಕುರಿತು ಬಿತ್ತುವವನು ಆ ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು.**

ಇವುಗಳು ಮತ್ತು ಇತರೆ "ಒತ್ತಡಗಳ" ಸಮಯಗಳಲ್ಲಿ, ಲೋಕದ ಒತ್ತಡಗಳು ಮತ್ತು ಸೈತಾನನ ಶೋಧನೆಗಳು ಸೇರುವಾಗ, ಕ್ರೈಸ್ತನು ತಪ್ಪು ಮಾಡುವ ಸಾಧ್ಯತೆಗಳು ಅಧಿಕವಾಗಿರುತ್ತವೆ. ಇದನ್ನು ತಿಳಿಸುವದು ಬಹುತೇಕ ನಿರಾಶಾವಾದ ಮತ್ತು ನಕಾರಾತ್ಮಕವಾಗಿ ತೋರುತ್ತದೆ, ಆದರೂ ನಾವು ಜೀವನದಲ್ಲಿ ಕೆಲವೊಮ್ಮೆ ತಪ್ಪಾದ ಆಯ್ಕೆಗಳನ್ನು ಮಾಡುತ್ತೇವೆ ಮತ್ತು ಕೆಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸಮಯದಲ್ಲಿ ಬಹುತೇಕ ವಿಶ್ವಾಸಿಗಳು ರಾಜಿಯಾಗಿರುವದರ ಬಗ್ಗೆ ಆಲೋಚನೆ ಮಾಡಬೇಕು. ಶೈಕ್ಷಣಿಕ ಮತ್ತು ವೃತ್ತಿಯ ಆಯ್ಕೆಗಳು, ವಾಸಿಸುವ ಸ್ಥಳ, ಸ್ನೇಹಿತರು, ಹಣಕಾಸು ನಿರ್ವಹಣೆ, ಹವ್ಯಾಸಗಳು ಮತ್ತು ಇನ್ನಿತರ ವಿಷಯಗಳಿಗೆ ಸಂಬಂಧಿಸಿದ ಅನೇಕ ತೀರ್ಮಾನಗಳ ಬಗ್ಗೆ ಆಲೋಚನೆ ಮಾಡಬೇಕು. ಒಬ್ಬನು ತನ್ನ ಪರಲೋಕದ ಕರೆಯನ್ನು ಹಿಂಬಾಲಿಸುವ ಕಾರ್ಯದಲ್ಲಿ ಪ್ರಗತಿಯನ್ನು ಸಾಧಿಸುವಾಗ, ಕಾರ್ಯಗಳು ಹೆಚ್ಚು ಗಂಭೀರವಾಗುತ್ತವೆ ಯಾಕಂದರೆ ಒಬ್ಬನು ಪ್ರತಿಯೊಂದು ತೀರ್ಮಾನ–ಎಲ್ಲಿ, ಯಾವಾಗ, ಏನು ಮತ್ತು ಹೇಗೆ ಎಂಬ ತನ್ನ ಜೀವನದ ಪ್ರತಿಯೊಂದು ಮಾಹಿತಿಯನ್ನು ಕ್ರಮಪಡಿಸಿಕೊಳ್ಳುತ್ತಾನೆ–ಇಲ್ಲಿ ಭೂಲೋಕದಲ್ಲಿ, ದೇವರ ರಾಜ್ಯದ ಮೇಲೆ ಪ್ರಭಾವವನ್ನು ಬೀರುತ್ತದೆ ಎಂಬದನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತಾನೆ.

ನಮ್ಮ ಎಲ್ಲಾ ತೀರ್ಮಾನಗಳು ಪರಿಣಾಮಗಳನ್ನು ಹೊಂದಿರುತ್ತವೆ.

ನಮ್ಮಲ್ಲಿಕೆಲವರುಪರಿಸ್ಥಿತಿಯಗಂಭೀರತೆಯನ್ನುಇನ್ನೂಅರ್ಥಮಾಡಿಕೊಂಡಿಲ್ಲ. ನಮ್ಮ ದೇವರು ಕೃಪೆಯ ದೇವರು ಎಂಬದು ಗೊತ್ತಿರುವದರಿಂದ ನಾವು ತಿಳಿದು ಅಥವಾ ತಿಳಿಯದೆ ಅದರ "ಅನುಕೂಲಗಳನ್ನು" ಪಡೆದುಕೊಳ್ಳುತ್ತೇವೆ. ಹೌದು, ದೇವರ ರಾಜ್ಯದಲ್ಲಿ ಎಲ್ಲವೂ ಕೃಪೆಯಿಂದ ದೊರೆಯುತ್ತದೆ ಆದರೂ, ಕರ್ತನು ನಮ್ಮ ಮೇಲೆ ಕೆಲವು ಜವಾಬ್ದಾರಿಕೆಗಳನ್ನು ಹಾಕಿದ್ದಾನೆ. ನಮಗೆ ಕಲಿಸಲಾಗಿರುವ ಸತ್ಯಗಳಿಗೆ ಅನುಸಾರವಾಗಿ ನಾವು ಜೀವಿಸುವದು ನಮ್ಮ ಜವಾಬ್ದಾರಿಕೆಯಾಗಿದೆ. ಶ್ರಮಶೀಲರಾಗಿ ಕೆಲಸ ಮಾಡುವದು ಮತ್ತು ನಾವು ಮಾಡುವ ಕಾರ್ಯಗಳಲ್ಲಿ ಸೋಮಾರಿತನವನ್ನು ತೊರೆಯುವದು ನಮ್ಮ ಜವಾಬ್ದಾರಿಕೆಯಾಗಿದೆ. ನಮ್ಮ ಶರೀರವನ್ನು ಶಿಲುಬೆಗೆ ಜಡಿಯುವದು ಮತ್ತು ಲೋಕ ಹಾಗೂ ಸೈತಾನನ ಶೋಧನೆಗಳನ್ನು ಎದುರಿಸುವದು ನಮ್ಮ ಜವಾಬ್ದಾರಿಕೆಯಾಗಿದೆ. ಈ ಕಾರ್ಯಗಳನ್ನೆಲ್ಲಾ ಕರ್ತನು ನಮಗಾಗಿ ಮಾಡುವದಿಲ್ಲ. (ಒಂದುವೇಳೆ ನಾವು ಆತನನ್ನು ಜ್ಞಾನಕ್ಕಾಗಿ ಬೇಡಿಕೊಂಡರೆ) ಆತನು ನಮಗೆ ಜ್ಞಾನವನ್ನು ದಯಪಾಲಿಸುತ್ತಾನೆ, ಆದರೆ ತೀರ್ಮಾನಗಳನ್ನು ನಾವೇ ತೆಗೆದುಕೊಳ್ಳಬೇಕು, ಮತ್ತು ನಾವು ತೆಗೆದುಕೊಳ್ಳುವ ತೀರ್ಮಾನಗಳ ಪರಿಣಾಮಗಳನ್ನು ಎದುರಿಸಲು ಸಿದ್ಧರಾಗಿರಬೇಕು.

# 3
# ಆದದ್ದರಿಂದ, ಜಾಣರಾಗಿರ್ರಿ

**ಮತ್ತಾಯ 10:16**
**ನೋಡಿರಿ, ತೋಳಗಳ ನಡುವೆ ಕುರಿಗಳನ್ನು ಹೊಗಿಸಿದಂತೆ ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ. ಆದದರಿಂದ ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳೂ ಆಗಿರ್ರಿ.**

ಕುರಿಗಳು—ದೇವಜನರು—ಖಂಡಿತವಾಗಿ ಸ್ನೇಹಪೂರ್ವಕವಾದ ವಾತಾವರಣದಲ್ಲಿ ಇಲ್ಲ! ಈ ವಿಷಯವಾಗಿ ನಮಗೆ ಎಚ್ಚರಿಕೆಯನ್ನು ಕೊಡುತ್ತಾ, ಕರ್ತನಾದ ಯೇಸು ಕ್ರಿಸ್ತನು ನಮಗೆ ಹೇಳಿರುವದೇನೆಂದರೆ *"ಸರ್ಪದಂತೆ ಜಾಣರೂ ಪಾರಿವಾಳದಂತೆ ನಿಷ್ಕಪಟಿಗಳೂ ಆಗಿರ್ರಿ."* ಲೋಕವು ಹಗೆಮಾಡಿದರೂ ಮತ್ತು ದುಷ್ಟವಾಗಿದ್ದರೂ, ನಾವು ಕೆಟ್ಟವರಾಗಿ ಅದರ ಕೆಟ್ಟತನಕ್ಕೆ ಸಮಾನರಾಗಬಾರದು. ಬದಲಾಗಿ, ನಾವು *"ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸಬೇಕು"*(ರೋಮಾಪುರದವರಿಗೆ 12:21). ನಾವು ಕ್ರಿಸ್ತನ ಕೃಪೆ ಮತ್ತು ಸದ್ಗುಣಗಳಿಗನುಸಾರ ನಡೆದುಕೊಳ್ಳಬೇಕು. ಸ್ನೇಹಪರವಲ್ಲದ ಲೋಕದ ನಡುವೆ *"ಪಾರಿವಾಳಗಳಂತೆ ನಿಷ್ಕಪಟಿಗಳಾಗಿರಬೇಕು"* ಎಂದು ಯೇಸು ಕ್ರಿಸ್ತನು ಹೇಳಿರುವ ಮಾತಿನ ಅರ್ಥ ಇದುವೇ ಆಗಿದೆ. ಯೇಸು ಕ್ರಿಸ್ತನ ಬುದ್ಧಿಮಾತಿನ ಮತ್ತೊಂದು ಭಾಗ *"ಸರ್ಪಗಳಂತೆ ಜಾಣರಾಗಿರಬೇಕು."* ಈ ಲೋಕದಲ್ಲಿ ನಾವು ಜೀವಿಸುವಾಗ ಜಾಣರು ಮತ್ತು ವಿವೇಕಿಗಳು ಆಗಿರಬೇಕು. ಮುಖ್ಯವಾಗಿ ಈ ಜೀವಿತದ ವಿಷಯವಾಗಿ, ನಾವು ನಮ್ಮ ಆತ್ಮೀಕತೆಯನ್ನು ಜ್ಞಾನ ಹಾಗೂ ತಿಳುವಳಿಕೆಯಿಂದ ವೃದ್ಧಿಸಿಕೊಳ್ಳಬೇಕು. ಈ ಲೋಕದ ಜನರು ಅತ್ಯಂತ ಸಾಮಾನ್ಯವಾಗಿ ನಮ್ಮ ಆತ್ಮೀಕತೆಯನ್ನು ಮೆಚ್ಚಿಕೊಳ್ಳುವದಿಲ್ಲ. ನಿಜವಾಗಿ ಹೇಳುವದಾದರೆ, ಬಹುತೇಕ ಜನರು ಆತ್ಮೀಕ-ಮನಸ್ಥಿತಿಯ ಕ್ರೈಸ್ತರನ್ನು ತಿರಸ್ಕಾರ ಮತ್ತು ಆಳವಾದ ನಿರ್ಲಕ್ಷ್ಯದಿಂದ ಕಾಣುತ್ತಾರೆ. ಆದ್ದರಿಂದ, ಈ ಲೋಕದಲ್ಲಿ ನಾವು ಉಳಿಯಬೇಕು ಮತ್ತು ಜಯಶೀಲರಾಗಿ ಬದುಕಬೇಕೆಂದರೆ ಜ್ಞಾನ ಅವಶ್ಯವಾಗಿದೆ.

# 4
# ಆತ್ಮೀಕರಾದರೂ ಪ್ರಾಯೋಗಿಕರಾಗಿರಬೇಕು

ಆತ್ಮೀಕರಾಗಿರುವದು ಒಳ್ಳೆಯದು ಮತ್ತು ವಿಶೇಷವಾಗಿ ಪ್ರಾಮುಖ್ಯವಾದದ್ದು ಆಗಿದ್ದರೂ, ನಾವು ಪ್ರಾಯೋಗಿಕರಾಗಿರುವದೂ ಅವಶ್ಯವಾಗಿದೆ. ಕೇವಲ ಆತ್ಮೀಕನಾಗಿದ್ದರೆ ಒಬ್ಬನು ದೇವರ ಉದ್ದೇಶವನ್ನು ನೆರವೇರಿಸುವದರಲ್ಲಿ ಮತ್ತು ಭೂಮಿಯ ಮೇಲೆ ಕರ್ತನಿಗಾಗಿ ಬಹಳಷ್ಟು ಕಾರ್ಯಗಳನ್ನು ಈಡೇರಿಸುವದರಲ್ಲಿ ಯಶಸ್ಸಾಗುತ್ತಾನೆ ಎಂಬದನ್ನು ದೃಢವಾಗಿ ಹೇಳಲು ಆಗುವದಿಲ್ಲ. ಒಬ್ಬನು ಆತ್ಮೀಕತೆಯನ್ನು ಪ್ರಾಯೋಗಿಕವಾದ ಜ್ಞಾನ ಮತ್ತು ತಿಳುವಳಿಕೆಯಿಂದ ಹೊಂದಿಸಬೇಕು. ಉದಾಹರಣೆಗೆ, ನೀವು ಕ್ರೈಸ್ತನಾಗಿರುವದರಿಂದ, ನಿಮ್ಮ ವಿವಾಹವು ಯಶಸ್ವಿಯಾಗುತ್ತದೆ ಎಂದು ದೃಢವಾಗಿ ಹೇಳಬಹುದು ಎಂಬದು ಇದರ ಅರ್ಥವಲ್ಲ. ನಿಮ್ಮ ವಿವಾಹ ಮತ್ತು ಕುಟುಂಬವನ್ನು ಕಟ್ಟುವದರಲ್ಲಿ ಇರುವ ಪ್ರಾಯೋಗಿಕವಾದ ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ಸಂತೋಷದ ಮನೆಯನ್ನು ಕಟ್ಟಿಕೊಳ್ಳಲು ಆ ತಿಳುವಳಿಕೆಯನ್ನು ಅಳವಡಿಸಿಕೊಳ್ಳಬೇಕು. ಇದೇ ಪ್ರಕಾರ, ನೀವು ದಶಮಭಾಗ ಮತ್ತು ಕಾಣಿಕೆಗಳನ್ನು ಕೊಡುವವರಾಗಿದ್ದು ಆರ್ಥಿಕವಾಗಿ ಅಭಿವೃದ್ಧಿಯಾಗಬೇಕೆಂದು ನಿರೀಕ್ಷಿಸಿದರೆ ಆಗುವದಿಲ್ಲ. ಇವೆಲ್ಲವುಗಳೊಂದಿಗೆ, ನಿಮ್ಮ ಉಳಿದ ಹಣವನ್ನು ಹೇಗೆ ಕ್ರಮಪಡಿಸಿಕೊಳ್ಳಬೇಕು ಮತ್ತು ಬುದ್ಧಿವಂತಿಕೆಯಿಂದ ಉಪಯೋಗಿಸಬೇಕು ಎಂಬದನ್ನು ನೀವು ಕಲಿತುಕೊಳ್ಳಬೇಕು.

ದೇವರು ಗುಣಪಡಿಸುತ್ತಾನೆ ಮತ್ತು ದೈವೀಕ ಆರೋಗ್ಯದೊಂದಿಗೆ ತನ್ನ ಜನರನ್ನು ಆಶೀರ್ವದಿಸುತ್ತಾನೆ ಎಂದು ನೀವು ನಂಬುವದರಿಂದ, ನೀವು ನಿಮ್ಮ ಆಹಾರ ಪದ್ಧತಿಗಳಲ್ಲಿ ಕ್ರಮಶಿಕ್ಷಣವಿಲ್ಲದವರಾಗಿ ಇರಬಹುದು ಅಥವಾ ಅತಿಯಾದ ಕೆಲಸದಿಂದ ನಿಮ್ಮ ದೇಹವನ್ನು ದೂಷಿಸಿಕೊಳ್ಳಬಹುದು ಎಂಬದು ಇದರ ಅರ್ಥವಲ್ಲ. ತನ್ನ ಜನರು ತಮ್ಮ ದೇಹಗಳನ್ನು ಪೋಷಿಸಿಕೊಳ್ಳುವಲ್ಲಿ ಕ್ರಮಶಿಕ್ಷಣವನ್ನು ಅನುಸರಿಸಬೇಕು ಎಂಬದಾಗಿ ದೇವರು ಬಯಸುತ್ತಾನೆ. ಯಾಕಂದರೆ, ಅದು ದೇವರ ಆಲಯವಾಗಿದೆ. ಹಾಗೆಯೇ, ದೇವರು ನಿಮ್ಮ ಜೀವಿತದ ಮೇಲೆ ಕರೆಯನ್ನು ಇಟ್ಟಿದ್ದಾನೆ ಎಂಬದು ನಿಮಗೆ

ಗೊತ್ತಿರುವದರಿಂದ, ನೀವು ನಿಮ್ಮ ಜೀವಿತದಲ್ಲಿ ಗೊತ್ತು ಗುರಿಯಿಲ್ಲದೆ "ಅಲೆದಾಡಬಹುದು" ಮತ್ತು ದೇವರು ನಿಮ್ಮ ವಿಷಯವಾಗಿ ಯೋಚನೆ ಮಾಡಿರುವ ಎಲ್ಲವುಗಳನ್ನು ನೆರವೇರಿಸಲು ನಿರೀಕ್ಷಿಸಬಹುದು ಎಂಬದು ಇದರ ಅರ್ಥವಲ್ಲ. ಮತ್ತೊಂದು ಕಡೆಯಲ್ಲಿ, ನೀವು ನಿಮ್ಮನ್ನು ಸಿದ್ಧಮಾಡಿಕೊಳ್ಳಬೇಕು, ತರಬೇತುಗೊಳಿಸಿಕೊಳ್ಳಬೇಕು ಮತ್ತು ಸಜ್ಜುಗೊಳಿಸಿಕೊಳ್ಳಬೇಕು ಹಾಗೂ ನಿಮ್ಮ ಜೀವಿತದ ಮೇಲಿರುವ ಆತನ ಕರೆಯನ್ನು ನೆರವೇರಿಸಲು ಹಂತಹಂತವಾಗಿ ದೇವರೊಂದಿಗೆ ಮುಂದೆ ಸಾಗಬೇಕು.

ಕ್ರೈಸ್ತೀಯ ಸೇವೆಯಲ್ಲಿರುವವರು, ಭೂಲೋಕದ ಮೇಲೆ ಪೂರ್ತಿಯಾಗಿ ಪರಿಣಾಮಕಾರಿಯಾಗಿರಲು ಕೇವಲ ಬಲವಾದ ಅಭಿಷೇಕವನ್ನು ಹೊಂದಿದ್ದರೆ ಸಾಲದು. ಭೂಮಿಯ ಮೇಲೆ ದೇವರಿಗಾಗಿ ಸ್ಫೋಟಕ ಶಕ್ತಿಯಾಗಿರಲು ನಮ್ಮ ಸೇವಾ ಪರಿಶ್ರಮಗಳನ್ನು ವ್ಯವಸ್ಥೆಮಾಡಿಕೊಳ್ಳುವದು, ಮೇಲ್ವಿಚಾರಣೆ ಮಾಡುವದು ಮತ್ತು ಸರಿಯಾಗಿ ಕ್ರಮಪಡಿಸಿಕೊಳ್ಳುವದು ಹೇಗೆ ಎಂಬದು ನಮಗೆ ಗೊತ್ತಿರಬೇಕು. ಅಭಿಷೇಕವು ಜನರ ಜೀವಿತಗಳಿಂದ ಸೈತಾನನ ನೊಗಗಳನ್ನು ಮುರಿಯುತ್ತದೆ ಮತ್ತು ಹೊರೆಗಳನ್ನು ತೆಗೆದುಹಾಕುತ್ತದೆ ಎಂಬದು ಸತ್ಯವಾಗಿದೆಯಾದರೂ, ಕೆಟ್ಟ ನಿರ್ವಹಣೆ ಮತ್ತು ಸರಿಯಾದ ವ್ಯವಸ್ಥೆಯ ಕೊರತೆ ತಮಗೆ ಕೊಡಲಾಗಿರುವ ಅಭಿಷೇಕದ ಪ್ರಭಾವವನ್ನು ವಿಸ್ತರಿಸದಂತೆ ಅನೇಕರಿಗೆ ಅಡ್ಡಿಯನ್ನುಂಟು ಮಾಡುತ್ತದೆ ಎಂಬದು ಸಹ ಸತ್ಯವಾಗಿದೆ.

ಕೆಲವೊಮ್ಮೆ, ನಾವು ದೇವರಿಗಿಂತಲೂ ಹೆಚ್ಚು ಆತ್ಮೀಕರಾಗಿ ನಟಿಸುತ್ತಾ ಇರುತ್ತೇವೆ! ನಾವು ಕೆಲವೊಮ್ಮೆ ಎಷ್ಟು ಆತ್ಮೀಕರಾಗುತ್ತೇವೆಂದರೆ ಭೂಲೋಕಕ್ಕೆ ನಮ್ಮ ಉಪಯೋಗವೇ ಇಲ್ಲ ಅನ್ನಿಸಿಬಿಡುತ್ತದೆ. ಅಂಥ ಪರಿಸ್ಥಿತಿಗಳಲ್ಲಿ ತನ್ನ ರಾಜ್ಯಕ್ಕಾಗಿ ದೇವರಿಗೂ ನಮ್ಮಿಂದ ಉಪಯುಕ್ತವಾದ ಕಾರ್ಯಗಳನ್ನು ಮಾಡಿಸಲು ಕಷ್ಟವಾಗಿ ಬಿಡುತ್ತದೆಯೇನೋ ಎಂದು ನನಗೆ ಅನ್ನಿಸುತ್ತದೆ! ನಮ್ಮ ಜೀವಿತಗಳ ವಿಷಯವಾಗಿರುವ ದೇವರ ಆಲೋಚನೆಗಳನ್ನು ನಮ್ಮ ಕ್ರಿಯೆಗಳು ಬಾಧಿಸುತ್ತವೆಯೇ, ಬದಲಾಯಿಸುತ್ತವೆಯೇ ಮತ್ತು ಅವುಗಳ ಮೇಲೆ ಪ್ರಭಾವ ಬೀರುತ್ತವೆಯೇ ಎಂಬ ವಿಷಯದ ಬಗ್ಗೆ ಯೋಚಿಸುತ್ತಾ ಅನೇಕ ದಿವಸಗಳನ್ನು ಕಳೆದಂಥ ಸಮಯ ನನ್ನ ಜೀವಿತದಲ್ಲಿಯೂ ಇತ್ತು. ಅದು ಬಹಳ ದುಃಖದ ಸಮಯವಾಗಿತ್ತು. ಒಂದು ಕಡೆ, ದೇವರು ಸಾರ್ವಭೌಮನು ಆತನ ಆಲೋಚನೆಗಳನ್ನು ಸೋಲಿಸಲು ಆಗುವದಿಲ್ಲ ಎಂಬದು ನನಗೆ ಗೊತ್ತಿತ್ತು.

*"ನೀನು ಸಕಲಕಾರ್ಯಗಳನ್ನು ನಡಿಸಬಲ್ಲಿಯೆಂತಲೂ ಯಾವ ಸಂಕಲ್ಪವೂ ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ"* (ಯೋಬ 42:2). ಆದರೂ, ಇನ್ನೊಂದು ಕಡೆ, ಸತ್ಯವೇದದಾದ್ಯಂತ ನಾವು ನೋಡುವದೇನೆಂದರೆ ತನ್ನ ಉದ್ದೇಶಗಳನ್ನು ನೆರವೇರಿಸಲು ದೇವರು ಮಾನವರ ವಿಧೇಯತೆ ಮತ್ತು ಸಹಕಾರವನ್ನು ಬಯಸುತ್ತಾನೆ. ಹುದುವಾಗಿರುವ "ಸಾರ್ವತ್ರಿಕ" ಮಟ್ಟದಲ್ಲಿ, ದೇವರು ತನ್ನ ಸಾರ್ವಭೌಮತ್ವದಲ್ಲಿ ಮಾನವರಿಗಾಗಿ ತಾನು ಉದ್ದೇಶಿಸಿರುವ ಎಲ್ಲವನ್ನು ಸಮಗ್ರವಾಗಿ ನೆರವೇರಿಸಲು ಬಯಸುತ್ತಾನೆ. ಆದರೆ ವ್ಯಕ್ತಿಗತ ಮಟ್ಟದಲ್ಲಿ, ನಮ್ಮ ಕ್ರಿಯೆಗಳು, ನಮ್ಮ ಜೀವಿತಗಳ ವಿಷಯವಾಗಿರುವ ದೇವರ ಉದ್ದೇಶಗಳ ಪ್ರಕಟನೆ ಮತ್ತು ನೆರವೇರಿಕೆಯ ಮೇಲೆ ಪ್ರಭಾವವನ್ನು ಬೀರುತ್ತವೆ. ದುಃಖದ ವಿಷಯ ಏನೆಂದರೆ ಬಹುತೇಕ ಕ್ರೈಸ್ತರು ತಮ್ಮ ಸ್ವಂತ ಕಾರ್ಯಗಳ ನಿಮಿತ್ತ ದೇವರ ಉನ್ನತವಾದ ಮತ್ತು ಉತ್ತಮವಾದ ಕಾರ್ಯಗಳನ್ನು ತಮ್ಮ ಜೀವಿತಗಳಲ್ಲಿ ನೆರವೇರಿಸಿಕೊಳ್ಳುವಲ್ಲಿ ವಿಫಲರಾಗುತ್ತಾ ಇದ್ದಾರೆ.

# 5
# ಜ್ಞಾನ–ನಮ್ಮ ರಕ್ಷಣೆ

**ಪ್ರಸಂಗಿ 9:16,18**
**[16]ಬಲಕ್ಕಿಂತ ಜ್ಞಾನವೇ ಶ್ರೇಷ್ಠ ...**
**[18]ಯುದ್ಧಾಯುಧಗಳಿಗಿಂತ ಜ್ಞಾನವೇ ಉತ್ತಮ ...**

**ಪ್ರಸಂಗಿ 10:10**
**... ಕಾರ್ಯಸಿದ್ಧಿಗೆ ಜ್ಞಾನವೇ ಸಾಧನ.**

**ಜ್ಞಾನೋಕ್ತಿಗಳು 4:7,8**
**[7]ಜ್ಞಾನವನ್ನು ಪಡೆಯಬೇಕೆಂಬದೇ ಜ್ಞಾನಬೋಧೆಯ ಪ್ರಥಮಪಾಠ.**
**[8]ಜ್ಞಾನವೆಂಬಾಕೆಯು ಶ್ರೇಷ್ಠಳು ಎಂದು ನೀನು ಭಾವಿಸಿದರೆ ಆಕೆಯು ನಿನ್ನನ್ನು ಉನ್ನತಿಗೆ ತರುವಳು; ಆಕೆಯನ್ನು ಅಪ್ಪಿಕೊಂಡರೆ ನಿನ್ನನ್ನು ಘನಪಡಿಸುವಳು.**

ಇದರ ಬಗ್ಗೆ ಆಲೋಚಿಸುವದನ್ನು ನಾನು ಮುಂದುವರೆಸಿದಾಗ, ನನ್ನ ಜೀವನದಲ್ಲಿ ನಾನು ತಪ್ಪುಗಳನ್ನು ಮಾಡಿದ್ದ ಅನೇಕ ಸಂದರ್ಭಗಳು ನನಗೆ ನೆನಪಾದವು. ಒಂದುವೇಳೆ ನಾನು ಮತ್ತಷ್ಟು ಶ್ರಮ ಹಾಕಿದ್ದರೆ ಏನಾಗುತ್ತಾ ಇತ್ತು? ಒಂದುವೇಳೆ ನಾನು ಅದಕ್ಕೆ ಬದಲಾಗಿ ಇದನ್ನು ಆಯ್ಕೆ ಮಾಡಿಕೊಂಡಿದ್ದರೆ ಏನಾಗುತ್ತಾ ಇತ್ತು? ಒಂದುವೇಳೆ ನಾನು ಅದಕ್ಕೆ ಬದಲಾಗಿ ಬೇರೊಂದರಲ್ಲಿ ನನ್ನ ಸಮಯ ಮತ್ತು ಶಕ್ತಿಯನ್ನು ಬಳಸಿದ್ದರೆ ಹೇಗಿರುತ್ತಾ ಇತ್ತು? ಒಂದುವೇಳೆ ನಾನು ಸರಿಯಾಗಿ ತಿಳಿದುಕೊಂಡಿದ್ದರೆ–ಒಂದುವೇಳೆ ನನಗೆ ಮೊದಲೇ ಅವಶ್ಯವಾದ ಮಾಹಿತಿ ಮತ್ತು ತಿಳುವಳಿಕೆ ಇದ್ದಿದ್ದರೆ ಕಾರ್ಯಗಳು ವ್ಯತ್ಯಾಸವಾಗಿ ಇರುತ್ತಿದ್ದವೇ? ನನ್ನ ಸ್ವಂತ ಕಾರ್ಯಗಳ ನಿಮಿತ್ತ ನನಗೆ ಎದುರಾದ ಕೆಲವು ಕಷ್ಟಗಳು ಮತ್ತು ಇಕ್ಕಟ್ಟುಗಳನ್ನು ತಪ್ಪಿಸಿರಬಹುದಾಗಿತ್ತು. ಈ ವಿಷಯಗಳ ಬಗ್ಗೆ ನಾನು ಆಲೋಚಿಸುತ್ತಾ ಇದ್ದಾಗ, ಪರಲೋಕದ ತಂದೆಗೆ ಮೊರೆಯಿಡುತ್ತಾ, ನನ್ನ ಜೀವನದಲ್ಲಿ ಆತನ ಉನ್ನತವಾದ ಮತ್ತು ಉತ್ತಮವಾದ ಕಾರ್ಯಗಳನ್ನು ಎಂದಿಗೂ ತಪ್ಪಿಸಿಕೊಳ್ಳುವದಿಲ್ಲ ಎಂಬದಾಗಿ ಪ್ರಾರ್ಥನೆ ಮಾಡಿದೆನು. ಬುದ್ಧಿಯುಳ್ಳ ತೀರ್ಮಾನಗಳನ್ನು ತೆಗೆದುಕೊಳ್ಳುವದರ ಪ್ರಾಮುಖ್ಯತೆಯನ್ನು, ಹೆಚ್ಚು ಗಂಭೀರವಾಗಿ ಪರಿಗಣಿಸುವ ಪ್ರೇರಣೆಯೂ ನನಗಾಯಿತು. ಜ್ಞಾನವು ನಮ್ಮ ರಕ್ಷಣೆಯಾಗಿದೆ. ನಾವು ಜ್ಞಾನವಂತರಾಗಿ

ಜೀವಿಸುವಾಗ, ಭದ್ರವಾಗಿ ಜೀವಿಸುವವರಾಗುತ್ತೇವೆ. ಸತ್ಯವೇದವು ನಮಗೆ ಹೇಳುವದೇನೆಂದರೆ, *"... ಕಾಲವೂ ಜ್ಞಾನತೀರ್ಪೂ ಉಂಟೆಂಬದು ಜ್ಞಾನಿಯ ಬುದ್ಧಿಗೆ ಗೊತ್ತು; ಪ್ರತಿಯೊಂದು ಕಾರ್ಯಕ್ಕೆ ಕಾಲವೂ ನ್ಯಾಯತೀರ್ಪೂ ಇರುವವಲ್ಲವೆ"* (ಪ್ರಸಂಗಿ 8:5,6). ಪ್ರತಿಯೊಂದು ವಿಷಯಕ್ಕೂ ಸರಿಯಾದ ಸಮಯ ಮತ್ತು ಸರಿಯಾದ ನ್ಯಾಯತೀರ್ಪು ಇರುತ್ತದೆ. ಎದುರಾಗುವ ಪರಿಸ್ಥಿತಿಗಳಲ್ಲಿ ಏನು ಮಾಡಬೇಕು, ಹೇಗೆ ಮಾಡಬೇಕು ಮತ್ತು ಸರಿಯಾದ ಕಾರ್ಯವನ್ನು ಯಾವಾಗ ಮಾಡಬೇಕು ಎಂಬದು "ಜ್ಞಾನಕ್ಕೆ" ಗೊತ್ತಿರುತ್ತದೆ.

ದೇವರ ವಾಕ್ಯವು ಹೇಳುವದೇನೆಂದರೆ, *"ನೀನು ನಡೆಯುವ ದಾರಿಯನ್ನು ಸಮಮಾಡು; ನಿನ್ನ ಮಾರ್ಗಗಳೆಲ್ಲಾ ದೃಢವಾಗಿರಲಿ"* (ಜ್ಞಾನೋಕ್ತಿಗಳು 4:26). ಬೇರೆ ಮಾತುಗಳಲ್ಲಿ ಹೇಳುವದಾದರೆ, ನೀವು ತೆಗೆದುಕೊಳ್ಳುವ ತೀರ್ಮಾನಗಳ ವಿಷಯವಾಗಿ ನಿಧಾನಿಸಿರಿ, ಯೋಚಿಸಿರಿ ಮತ್ತು ಎರಡು ಅಥವಾ ಮೂರು ಸಲ ಆಲೋಚನೆ ಮಾಡಿರಿ. ಬುದ್ಧಿಯುಳ್ಳ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ, ಅತ್ಯಂತ ಸಾಮಾನ್ಯವಾಗಿ ಅಲ್ಲದಿದ್ದರೂ, ಎದುರಾಗಿರುವ ವಿಷಯದ ಬಗ್ಗೆ ನಮ್ಮ ತಿಳುವಳಿಕೆ ಮತ್ತು ವಿವೇಕವನ್ನು ಹೆಚ್ಚಿಸಿಕೊಳ್ಳಲು ಮಾಹಿತಿಯನ್ನು ಸಂಪಾದಿಸಿಕೊಳ್ಳಬೇಕು. ನಿರ್ದಿಷ್ಟವಾದ ವಿಷಯಗಳಲ್ಲಿ ಹೆಚ್ಚಾಗಿ ಕಲಿತುಕೊಂಡಿರುವವರು ಮತ್ತು ಅನುಭವ ಹೊಂದಿರುವವರಿಂದ ಕಲಿತುಕೊಳ್ಳುವದು ಹಾಗೂ ಅವರೊಂದಿಗೆ ಮಾತನಾಡುವದರಿಂದನಮಗೆಹೆಚ್ಚಿನಲಾಭವಾಗುತ್ತದೆ.ಈಕಾರಣದಿಂದಲೇ ಸತ್ಯವೇದವು ಹೇಳುವದೇನೆಂದರೆ, *"ಜ್ಞಾನಿಗೆ ತ್ರಾಣ. ಬಲ್ಲವನಿಗೆ ಬಹು ಬಲ. ಮಂತ್ರಾಲೋಚನೆಯಿಂದ ಯುದ್ಧವನ್ನು ನಡಿಸು; ಬಹು ಸುಮಂತ್ರಿಗಳು ಇರುವಲ್ಲಿ ಸುರಕ್ಷಣೆಯಿರುವದು"* (ಜ್ಞಾನೋಕ್ತಿಗಳು 24:5,6). ನಮಗೆ ಸಲಹೆ ಮತ್ತು ಸೂಚನೆಯ ಅವಶ್ಯಕತೆಯಿಲ್ಲ ಎಂಬದಾಗಿ ಆಲೋಚನೆ ಮಾಡುವಷ್ಟು ಆತ್ಮೀಕರಾಗಬಾರದು.

ಸೇವೆಯಲ್ಲಿ, ವರಗಳು ಮತ್ತು ಅಭಿಷೇಕ ವಿಶೇಷವಾಗಿ ಪ್ರಾಮುಖ್ಯವಾದವುಗಳಾಗಿವೆ. ಆದರೂ, ಅವುಗಳನ್ನು ಗರಿಷ್ಠವಾಗಿ ಉಪಯೋಗಿಸಲು ಮತ್ತು ಕಡೇ ತನಕ ಉಳಿಯುವ ಪ್ರಭಾವ ಬೀರಲು, ನಮ್ಮ ವರಗಳು ಹಾಗೂ ಅಭಿಷೇಕಕ್ಕೆ, ಒಳ್ಳೆಯ ನಾಯಕತ್ವದ ಕೌಶಲ್ಯಗಳು, ಒಳ್ಳೆಯ ವ್ಯವಸ್ಥೆ, ಕಠಿಣ ಪರಿಶ್ರಮ, ಕ್ರಮಶಿಕ್ಷಣ, ಸತತವಾದ ಅಭಿವೃದ್ಧಿ ಮತ್ತು ಅಧಿಕವಾದ ದೈವೀಕ ಜ್ಞಾನ ಸೇರಿಸಿಕೊಳ್ಳುವದು ಖಂಡಿತವಾಗಿಯೂ ಪ್ರಾಮುಖ್ಯವಾಗಿದೆ.

# 6
# ದೇವರ ಒಳ್ಳೇತನ

**ಜ್ಞಾನೋಕ್ತಿಗಳು 3:5,6**
**[5]ಸ್ವಬುದ್ಧಿಯನ್ನೇ ಆಧಾರಮಾಡಿಕೊಳ್ಳದೆ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರವಸಬಿಡು. [6]ನಿನ್ನ ಎಲ್ಲಾ ನಡವಳಿಕೆಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು; ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು.**

ಏನೇಆದರೂ, ನಮ್ಮ ಸಾರ್ವಭೌಮನಾದ ದೇವರು ಒಳ್ಳೆಯವನು ಮತ್ತು ಕರುಣೆಯುಳ್ಳವನಾಗಿದ್ದಾನೆ. ಆತನು ಒಂದು ಚಿಕ್ಕ ಗುಬ್ಬಚ್ಚಿಯನ್ನೂ ಮರೆಯುವದಿಲ್ಲ. ನಮ್ಮ ತಲೆಯ ಕೂದಲುಗಳೆಲ್ಲವೂ ಲೆಕ್ಕಿಸಲ್ಪಟ್ಟಿವೆ (ಲೂಕ 12:6,7). ಸಾರ್ವಭೌಮನಾಗಿ, ಕರ್ತನು ಅದ್ಭುತವಾದ ರೀತಿಯಲ್ಲಿ ನಮ್ಮ ಅನುದಿನ ಜೀವನದ ಮಾಹಿತಿಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಆತನು ನಮ್ಮಿಂದ ಬಯಸುವಂಥದ್ದೆಲ್ಲಾ ನಾವು ಆತನಲ್ಲಿ ಭರವಸೆಯನ್ನಿಡಬೇಕು ಮತ್ತು ಆತನನ್ನು ಒಪ್ಪಿಕೊಳ್ಳಬೇಕು, ಆತನಾದರೋ ನಮ್ಮ ಮಾರ್ಗಗಳನ್ನು ಸರಾಗಮಾಡುವದಾಗಿ ವಾಗ್ದಾನ ಮಾಡಿದ್ದಾನೆ. ಹೌದು, ಜೀವನದ ಅನೇಕ ಸಮಸ್ಯೆಗಳಲ್ಲಿ ಜ್ಞಾನ ಮತ್ತು ತಿಳುವಳಿಕೆಗಾಗಿ ಆತನನ್ನು ಆತುಕೊಳ್ಳುವ ಜವಾಬ್ದಾರಿಕೆ ನಮ್ಮದಾಗಿದೆ. ನಾವು ಈ ಕಾರ್ಯವನ್ನು ಮಾಡುವಾಗ, ಕರ್ತನು ನಮ್ಮ ಮಾರ್ಗಗಳನ್ನು ಕ್ರಮಪಡಿಸುತ್ತಾನೆ. *"ಸತ್ಪುರುಷನ ಗತಿಸ್ಥಾಪನೆಯು ಯೆಹೋವನಿಂದಲೇ ಆಗಿದೆ, ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ"* (ಕೀರ್ತನೆಗಳು 37:23). ದೇವರು ನಮಗಾಗಿ ನೇಮಿಸಿರುವ ಕಾರ್ಯಗಳಲ್ಲಿ ನಮ್ಮನ್ನು ನಡೆಸಲು ನಮ್ಮ ಜೀವಿತದ ಘಟನೆಗಳನ್ನು ಕ್ರಮಪಡಿಸುತ್ತಾನೆ. ಈ ಪ್ರಕ್ರಿಯೆಯಲ್ಲಿ, ಒಂದುವೇಳೆ ನಾವು ಇನ್ನೂ ತಪ್ಪುಗಳನ್ನು ಮಾಡಿದರೂ, ಎಡವಿದರೂ ಮತ್ತು ಬಿದ್ದು ಹೋದರೂ, ಸಂಪೂರ್ಣವಾಗಿ ನಾಶವಾಗುವದಿಲ್ಲ ಯಾಕಂದರೆ ಕರ್ತನು ನಮ್ಮನ್ನು ಮೇಲೆತ್ತುತ್ತಾನೆ. ಅಲ್ಲಿಗೆ ನಮ್ಮ ಜೀವಿತಗಳ ವಿಷಯವಾಗಿನ ದೇವರ ಕನಸು ಕೊನೆಯಾಗುವದಿಲ್ಲ. *"ಅವನು ಕೆಳಗೆ ಬಿದ್ದರೂ ಏಳದೆ ಹೋಗುವದಿಲ್ಲ; ಯೆಹೋವನು ಅವನನ್ನು ಕೈಹಿಡಿದು ಉದ್ಧಾರಮಾಡುವನು"* (ಕೀರ್ತನೆಗಳು 37:24). ಆತನು ನಾವು ಎದ್ದು ನಿಲ್ಲುವಂತೆ ಮಾಡುತ್ತಾನೆ ಮತ್ತು ನಮ್ಮ ಪ್ರಯಾಣವನ್ನು ಮತ್ತೆ

ಏರ್ಪಡಿಸುತ್ತಾನೆ. ಅದಕ್ಕಾಗಿ ದೇವರಿಗೆ ಸ್ತೋತ್ರ!

**ಕೀರ್ತನೆಗಳು 40:1-3**

**1ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ನಿರೀಕ್ಷಿಸಿದೆನು; ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು.**

**2ನನ್ನನ್ನು ನಾಶನದ ಗುಂಡಿಯೊಳಗಿಂದ ಎತ್ತಿದನು; ಕೆಸರಿನೊಳಗಿಂದ ನನ್ನನ್ನು ತೆಗೆದು ಬಂಡೆಯ ಮೇಲೆ ನಿಲ್ಲಿಸಿ ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು.**

**3ಆತನು ನನ್ನ ಬಾಯಲ್ಲಿ ನೂತನಕೀರ್ತನೆಯನ್ನು ಹುಟ್ಟಿಸಿದ್ದಾನೆ; ಅದು ನಮ್ಮ ದೇವರ ಸ್ತೋತ್ರವೇ. ಆತನ ಮಹತ್ಕಾರ್ಯಗಳನ್ನು ನೋಡಿದ ಅನೇಕರು ಭಯಭಕ್ತಿಯುಳ್ಳವರಾಗಿ ಯೆಹೋವನಲ್ಲಿ ನಂಬಿಕೆಯಿಡುವರು.**

ಕೀರ್ತನೆಗಾರನಾದ, ದಾವೀದನು, *"ಘೋರವಾದ ಗುಂಡಿಯೊಳಗೆ"* ಬಿದ್ದಿದ್ದನು, ಅವನ ಕಾಲು *"ಕೆಸರಿನೊಳಗೆ"* ಸಿಕ್ಕಿಕೊಂಡಿತ್ತು. ಅವನು ಅಂಥ ಪರಿಸ್ಥಿತಿಗೆ ಒಳಗಾಗಲು ಅನೇಕ ಕಾರಣಗಳು ಇದ್ದಿರಬಹುದು. ಆದರೆ ಅವನು ಹೇಳಿರುವದೇನೆಂದರೆ ಅವನು ಯೆಹೋವನಿಗೋಸ್ಕರ *"ತಾಳ್ಮೆಯಿಂದ ನಿರೀಕ್ಷಿಸಿದನು"* ಮತ್ತು ಕರ್ತನು ಅವನನ್ನು ಗುಂಡಿಯೊಳಗಿಂದ ಮೇಲೆತ್ತಿದನು ಹಾಗೂ ಅವನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು (ಕೀರ್ತನೆಗಳು 40:1-3). ಹಲ್ಲೆಲೂಯ! ಇದು ದೇವರ ಒಳ್ಳೇತನವಾಗಿದೆ. ನಾವು ತಪ್ಪುಗಳನ್ನು ಮಾಡಿದರೂ ಮತ್ತು ಘೋರವಾದ ಗುಂಡಿಯೊಳಗೆ ಬಿದ್ದರೂ, ಕರ್ತನು ನಮ್ಮನ್ನು ಮೇಲೆತ್ತಲು ಹಾಗೂ ಬಂಡೆಯ ಮೇಲೆ ನಿಲ್ಲಿಸಲು ಶಕ್ತನಾಗಿದ್ದಾನೆ. ನಮ್ಮ ತಪ್ಪುಗಳು ನಮಗೆ ನೋವನ್ನುಂಟು ಮಾಡಬಹುದು. ನಮ್ಮ ತಪ್ಪು ಮಾಹಿತಿಯ ತೀರ್ಮಾನಗಳು ವಿಳಂಬಗಳಿಗೆ ಕಾರಣವಾಗಬಹುದು. ನಮ್ಮ ವಿಫಲತೆಗಳು ಸುತ್ತುಮಾರ್ಗಗಳಿಗೆ ಕಾರಣವಾಗಬಹುದು, ಆದರೆ ನಾವು ಕರ್ತನನ್ನು ಬಿಗಿಯಾಗಿ ಹಿಡಿದುಕೊಂಡಿರುವ ತನಕ, ನಮ್ಮ ಜೀವಿತಗಳಲ್ಲಿ ತನ್ನ ಯೋಜನೆಗಳನ್ನು ನೆರವೇರಿಸಲು ಆತನು ನಮ್ಮನ್ನು ಶಕ್ತರನ್ನಾಗಿ ಮಾಡುತ್ತಾನೆ. ದೇವರು ನಮ್ಮ ವಿಫಲತೆಗಳಿಗಿಂತಲೂ ದೊಡ್ಡವನಾಗಿದ್ದಾನೆ. ಆತನು ನಮ್ಮ ತಪ್ಪುಗಳಿಗಿಂತಲೂ ದೊಡ್ಡವನಾಗಿದ್ದಾನೆ. ಒಂದುವೇಳೆ ನಾವು ನಮ್ಮ ತಪ್ಪುಗಳಿಂದ ಕಲಿತುಕೊಂಡರೆ, ಬುದ್ಧಿವಂತರಾಗಿ ಓಟವನ್ನು ಓಡಲು ಮುಂದುವರೆಸಿದರೆ, ದೇವರು ನಮ್ಮನ್ನು ನಮ್ಮ ಗಮ್ಯಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾನೆ. ನಮ್ಮ ದುಃಖವನ್ನು ಸಂತೋಷವಾಗಿ ಮಾರ್ಪಡಿಸುವಾತನು ದೇವರು ಮಾತ್ರವೇ ಆಗಿದ್ದಾನೆ. *"ಆಗ ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದಿ; ನಾನು ಕಟ್ಟಿಕೊಂಡಿದ್ದ*

*ಗೋಣಿತಟ್ಟನ್ನು ತೆಗೆದುಬಿಟ್ಟು ಹರ್ಷವಸ್ತ್ರವನ್ನು ನನಗೆ ಧಾರಣೆಮಾಡಿಸಿದಿ"* (ಕೀರ್ತನೆಗಳು 30:11). ದೇವರು ಸುಂದರವಲ್ಲದ ಕಾರ್ಯಗಳನ್ನು ಸುಂದರವನ್ನಾಗಿಸಲು ಶಕ್ತನಾಗಿದ್ದಾನೆ. ಆತನು ನಮ್ಮ ಗೋಳಾಟಗಳನ್ನು ದೈವೀಕ ಗಮ್ಯತೆಗಳನ್ನಾಗಿ ಮಾರ್ಪಡಿಸುತ್ತಾನೆ. ದೇವರು ಸಮಯಕ್ಕಿಂತಲೂ ದೊಡ್ಡವನಾಗಿದ್ದಾನೆ. *"ಗುಂಪು ಮಿಡತೆ, ಸಣ್ಣ ಮಿಡತೆ, ದೊಡ್ಡ ಮಿಡತೆ, ಚೂರಿ ಮಿಡತೆ, ಅಂತು ನಾನು ನಿಮ್ಮ ಮೇಲೆ ಕಳುಹಿಸಿದ ನನ್ನ ದೊಡ್ಡ ದಂಡು ತಿಂದುಬಿಟ್ಟ ವರುಷಗಳನ್ನು ನಾನು ನಿಮಗೆ ಕಟ್ಟಿಕೊಡುವೆನು"* (ಯೋವೇಲ 2:25). ನಮ್ಮ ತಪ್ಪಾದ ಆಯ್ಕೆಗಳ ನಿಮಿತ್ತ ಕಳೆದುಹೋದ ಸಮಯವನ್ನು ಮತ್ತೆ ಒದಗಿಸುವದು ಹೇಗೆ ಎಂಬದನ್ನು ಆತನು ಬಲ್ಲವನಾಗಿದ್ದಾನೆ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಶಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ" ಎಂದು ಹೇಳುತ್ತದೆ* (ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ - ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."* (ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"* (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ*

*ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.*

*ಆಮೇನ್.*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜ್ಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work—Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

| | |
|---|---|
| **ಹದಿಹರೆಯದವರು** | **ವರ್ತನೆಯ ಅಸ್ತವ್ಯಸ್ತತೆಗಳು** |
| **ವಯಕ್ತಿಕ ಹೊಂದಾಣಿಕೆಗಳು** | **ವ್ಯಕ್ತಿತ್ವ ಅಸ್ತವ್ಯಸ್ತತೆಗಳು** |
| **ಸಂಭಂದಿತ ಸವಾಲುಗಳು** | **ಮಾನಸಿಕ/ಭಾವನಾತ್ಮಕ ಸಮಸ್ಯೆಗಳು** |
| **ಶೈಕ್ಷಣಿಕ ಕಡಿಮೆ ಸಾಧನೆ** | **ಒತ್ತಡ/ಆಘಾತ** |
| **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು** | **ಮಧುಪಾನ/ಮಾದಕವಸ್ತು ದುರುಪಯೋಗ** |
| **ಕುಟುಂಬ/ದಂಪತಿಗಳು: ವಿವಾಹಪೂರ್ವ, ವೈವಾಹಿಕ** | **ಆತ್ಮೀಕ ಸಮಸ್ಯೆಗಳು** |
| **ಪೋಷಕರು/ಮಕ್ಕಳು/ಒಡಹುಟ್ಟಿದವರು /ಗೆಳೆಯರು** | **ಜೀವನ ತರಬೇತಿ** |

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ: +91-80-25452617** ಅಥವಾ ಟೋಲ್ - ಫ್ರೀ (ಭಾರತದೊಳಗೆ) **1-800-300-00998**
**ಇಮೆಲ್: counselor@chrysalislife.org**

ಕ್ರಿಸಾಲಿಸ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru- 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ* ***apcwo.org/give***.

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು
apcbiblecollege.org

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ–ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

**ಅನ್ ಲೈನ್** ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ನಾವೆಲ್ಲರೂ, ಅಪೂರ್ಣರಾಗಿರುವ ಕಾರಣ, ತಪ್ಪುಗಳನ್ನು ಮಾಡುತ್ತೇವೆ ಎಂಬದು ಸತ್ಯವೇ ಆಗಿದೆ. ಪ್ರಥಮ ಬಾರಿಗೆ ನಾವು ಎದುರಿಸುವ ಪರಿಸ್ಥಿತಿಗಳಲ್ಲಿ ತಪ್ಪಾದ ತೀರ್ಪುಗಳು ಘೋರವಾದ ಪರಿಣಾಮಗಳಿಗೆ ಕಾರಣವಾಗಿರುತ್ತವೆ. ದೇವರು ನಮ್ಮ ವಿಷಯವಾಗಿ ಮಾಡಿರುವ ಆಲೋಚನೆಗಳ ಮೇಲೆ ನಮ್ಮ ತಪ್ಪಾದ ಆಯ್ಕೆಗಳು ಹೇಗೆ ಪರಿಣಾಮವನ್ನು ಬೀರುತ್ತವೆ? ದೇವರ ಉನ್ನತವಾದ ಮತ್ತು ಉತ್ತಮವಾದ ಆಲೋಚನೆಗಳು ನಮ್ಮ ಜೀವಿತಗಳಲ್ಲಿ ನೆರವೇರದಂತೆ ನಮ್ಮ ತಪ್ಪುಗಳು ಅವುಗಳನ್ನು ಸೋಲಿಸುತ್ತವೆಯೇ, ಬದಲಾಯಿಸುತ್ತವೆಯೇ ಅಥವಾ ಯಾವುದಾದರು ರೀತಿಯಲ್ಲಿ ಅಡ್ಡಿಪಡಿಸುತ್ತವೆಯೇ?

ಈ ಪುಸ್ತಕವು ನಮ್ಮ ಕ್ರೈಸ್ತೀಯ ನಂಬಿಕೆಯ ಪ್ರಾಯೋಗಿಕ ಭಾಗವನ್ನು ಜಾಗೃತಗೊಳಿಸುವ ಉದ್ದೇಶವನ್ನು ಹೊಂದಿದೆ. ನಮ್ಮ ಜೀವಿತಗಳ ಮೇಲಿರುವ ದೇವರ ಯೋಜನೆಯನ್ನು ನೆರವೇರಿಸುವಲ್ಲಿ ನಮ್ಮ ಗಂಭೀರವಾದ ಜವಾಬ್ದಾರಿಕೆಯನ್ನು ಅರ್ಥಮಾಡಿಸುವ ಉದ್ದೇಶವನ್ನು ಇದು ಹೊಂದಿದೆ. ನಮ್ಮ ಕ್ರಿಯೆಗಳನ್ನು ಆತ್ಮೀಕರಣಗೊಳಿಸುವದನ್ನು ಮತ್ತು ಅವುಗಳ ಜವಾಬ್ದಾರಿಕೆ ಕಲ್ಪಿಸಿಕೊಳ್ಳುವದನ್ನು ನಿಲ್ಲಿಸಲು ಇದು ಕರೆಯನ್ನು ಕೊಡುತ್ತದೆ. ಈ ಜೀವನದ ಕಾರ್ಯಗಳಲ್ಲಿ "ಜಾಣರಾಗಲು" ಇದು ಬುದ್ಧಿಮಾತಾಗಿದೆ.


**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org